ಗಮನಸೆಳೆಯುವ ಸೂಚನೆಗಳು

(ಅ) ಕರ್ನಾಟಕ ಕೈಮಗ್ಗ ಅಬಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರಗಳಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗಿರುವ ಬಗ್ಗೆ.

+ ಶ್ರೀ **ರಾಮದಾಸ್ (ಕೃಷ್ಣರಾಜ):** ಮಾನ್ಯ ಉಪಾಧ್ಯಕ್ಷರೇ, ಈ ಸರ್ಕಾರ ಪ್ರಮುಖವಾಗಿ ರೈತರ ಪರವಾದಂತಹ ಹಾಗೂ ನೇಕಾರರ ಪರವಾದಂತಹ ಸರ್ಕಾರ ಎನ್ನುವ ಘೋಷಣೆ ಮುಖಾಂತರ ಏನು ಅಧಿಕಾರಕ್ಕೆ ಬಂದ ಮೇಲೆ ವಿಶೇಷವಾಗಿ 1994-95ನೇ ಸಾಲಿನಲ್ಲಿ ನೇಕಾರರಿಗೊಸ್ಕರ ನೂಲನ್ನು ಕೊಂಡುಕೊಂಡು ಅಲ್ಲಿರುವ ನೌಕರರಿಗೆ ಕೊಡುವುದಕ್ಕೊಸ್ಕರ 18 ಕೋಟಿ ರೂಪಾಯಿಗಳನ್ನು ಇಡಲಾಗಿತ್ತು. 1994-95ನೇ ಸಾಲಿನಲ್ಲಿ ಈ ವಿಚಾರದಲ್ಲಿ ಕರ್ನಾಟಕ ಹ್ಯಾಂಡ್‌ಲೂಂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಆಗಿರುವಂತಹ ಅವ್ಯವಹಾರಗಳ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್ (ಜವಳಿ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಅದಕ್ಕೆ ಕಾಲಾವಕಾಶವನ್ನು ಕೇಳಿದ್ದೇನೆ, ಉತ್ತರವನ್ನು ನಾಳೆ ಅಥವಾ ನಾಡಿದ್ದು ಕೊಡುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದು ನಂತರ ಆದೇಶ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತಾರೆ.

(ಆ) ಈಶಾನ್ಯ ರಾಜ್ಯಗಳಿಂದ ಸರಬರಾಜಾಗುತ್ತಿದ್ದ ಬಿದಿರು ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದಾಗಿ ನಿಂತು ಹೋಗಿರುವುದರಿಂದ ರಾಜ್ಯದ ಅಗರಬತ್ತಿ ತಯಾರಿಕರಿಗೆ ಉಂಟಾಗುತ್ತಿರುವ ತೊಂದರೆ ಬಗ್ಗೆ.

ಶ್ರೀ ಡಿ. ಮಾರುತಿರಾವ್ ಪವಾರ (ನರಸಿಂಹರಾಜ): ಮಾನ್ಯ ಉಪಾಧ್ಯಕ್ಷರೇ, ಈಶಾನ್ಯ ರಾಜ್ಯಗಳಿಂದ ಸರಬರಾಜಾಗುತ್ತಿದ್ದ ಬಿದಿರು ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದಾಗಿ ನಿಂತು ಹೋಗಿರುವುದರಿಂದ ರಾಜ್ಯದ ಅಗರಬತ್ತಿ ತಯಾರಿಕರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೈ. ರಾಮಕೃಷ್ಣ: ಮಾನ್ಯ ಉಪಾಧ್ಯಕ್ಷರೇ ಕರ್ನಾಟಕ ರಾಜ್ಯದಲ್ಲಿ ಸುಮಾರು 10 ಲಕ್ಷ ಜನ ಊದುಬತ್ತಿ ಕೈಗಾರಿಕೆಯಲ್ಲಿ ಯಾರು ನಿರತರಾಗಿದ್ದರು ಬಡವರು ಅವರ ಹೊಟ್ಟೆ ಮೇಲೆ ಹೊಡೆಯತಕ್ಕಂಥ ಕೆಲಸವಾಗಿದೆ. ಅದಕ್ಕೆ ಒಂದು ಸೂಚನೆ ಇದೆ. ಅದನ್ನು ಗಮನಕ್ಕೆ ತರುತ್ತೇನೆ. ಅದು ಜಡ್ಜ್‌ಮೆಂಟ್ ಆಗಿರತಕ್ಕಂಥಾದ್ದು. ಅವರು ಉತ್ತರ ಕೊಟ್ಟರೆ ಸಾಕು.

ಉಪಾಧ್ಯಕ್ಷರು: ಈಗ ಮಾನ್ಯ ಸದಸ್ಯರು ಗಮನ ಸೆಳೆದ ನಂತರ ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ವೈ. ರಾಮಕೃಷ್ಣ: ಸ್ಟೇಟ್‌ಮೆಂಟ್ ಆದಮೇಲೆ ನನಗೆ ಅವಕಾಶ ಕೊಡಿ.